ಕಟ್ಟಿಕೊಂಡಿದ್ದಾರೆ ಅಂಥವರನ್ನು ಸಕ್ರಮ ಮಾಡುವ ಕುರಿತು ನಾನು ಈಗಾಗಲೆ ಅಧಿಕಾರಿಗಳೊಡನೆ ಚರ್ಚಿಸಿದ್ದೇನೆ. ಇದಕ್ಕೆ ಕಾನೂನು ತಿದ್ದುಪಡಿ ತರುವ ಅವಶ್ಯಕತೆ ಇದೆ ತರುತ್ತೇನೆ.

ವಿಷಯ: ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಕಟಿಂಗಿಗೆ ಅನುಮತಿ.

247 (1428)

ಶ್ರೀ ಕುಂಬ್ಳೆ ಸುಂದರರಾವ್, ಎಂ.ಎಲ್.ಎ: ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ರೋಡ್ ಕಟ್ಟಿಂಗ್ ಪರವಾನಿಗೆ ಕೊಡುವುದಕ್ಕೆ ಇರುವ ನಿಯಮಗಳೇನು?

ಆ) ಹೀಗೆ ಕಟ್ಟಿಂಗ್ ಮಾಡಿದ ರಸ್ತೆಯನ್ನು ದುರಸ್ತಿ ಮಾಡಬೇಕಾದ ಕರ್ತವ್ಯ ಯಾರದ್ದು? ಕಟ್ಟಿಂಗ್ ಮಾಡಿದ ಸ್ಥಳಗಳಲ್ಲಿ ದುರಸ್ತಿಯಾಗದೇ ಇರುವುದರಿಂದ ವಾಹನ ಚಾಲಕರುಗಳಿಗೆ ಉಂಟಾಗುವ ತೊಂದರೆಯನ್ನು ತಪ್ಪಿಸಲು ಮಹಾನಗರಪಾಲಿಕೆಯವರು ಸೂಕ್ತ ಗಮನ ಹರಿಸುತ್ತಿದ್ದಾರೆಯೇ?

ಇ) ರೋಡ್ ಕಟ್ಟಿಂಗ್ ಮಾಡಿದ ನಂತರ ಸಕಾಲದಲ್ಲಿ ದುರಸ್ತಿ ಮಾಡುವುದನ್ನು ಕಡ್ಡಾಯ ಮಾಡಿ ನಿಯಮಗಳನ್ನು ರೂಪಿಸಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):

ಅ) ರೋಡ್ ಕಟ್ಟಿಂಗ್‌ಗೆ ಪರವಾನಿಗೆಗಾಗಿ ಸಾರ್ವಜನಿಕರು ಹಾಗೂ ಇತರ ಇಲಾಖೆಗಳು ಅರ್ಜಿಯನ್ನು ಮಹಾನಗರ ಪಾಲಿಕೆಗೆ ನೀಡಬೇಕು. ತದನಂತರ ಸ್ಥಳಪರಿಶಿಲನೆ ನಡೆಸಿ ರೋಡ್ ಕಟ್ಟಿಂಗ್ ಪೂರ್ವ ಸ್ಥಿತಿಗೆ ತರುವ ವೆಚ್ಚವನ್ನು ಅರ್ಜಿದಾರರಿಂದ ವಸೂಲಿ ಮಾಡಿಕೊಂಡು ಪರವಾನಿಗೆ ನೀಡಲಾಗುತ್ತಿದೆ. (ಮಳೆಗಾಲ ಹೊರತುಪಡಿಸಿ)

ಆ) ರೋಡ್ ಕಟ್ಟಿಂಗ್ ಮಾಡಿದ ತಕ್ಷಣ ಅರ್ಜಿದಾರರೇ ರಸ್ತೆಯ ಕಡಿತವನ್ನು ರಸ್ತೆಯ ಮಟ್ಟಕ್ಕೆ ರಿಪೇರಿ ಮಾಡಬೇಕಾಗುತ್ತದೆ. ನಂತರ ಮಹಾನಗರ ಪಾಲಿಕೆ ವತಿಯಿಂದ ಪೂರ್ವ ಸ್ಥಿತಿಗೆ ತರುವ ಕೆಲಸವನ್ನು ಮಾಡಲಾಗುತ್ತದೆ. ರಸ್ತೆ ಕಡಿತಗಳ ಸ್ಥಳಗಳಲ್ಲಿ ವಾಹನ ಚಾಲಕರಿಗೆ ತೊಂದರೆ ತಪ್ಪಿಸಲು ಮಹಾನಗರ ಪಾಲಿಕೆ ಗಮನ ಹರಿಸಿ ಕ್ರಮ ಕೈಗೊಳ್ಳುತ್ತಿದೆ.

ಇ) ಅ' ಮತ್ತು 'ಆ' ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್: ಸನ್ಮಾನ್ಯ ಉಪಾಧ್ಯಕ್ಷರೇ,...

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಸದಸ್ಯರು ತಾವು ಇರುವಾಗ ತಮ್ಮನ್ನು ಉಪಾಧ್ಯಕ್ಷರೇ ಎಂದರು.

ಶ್ರೀ ವಾಟಾಳ್ ನಾಗರಾಜ್: ಈ ರೀತಿ ತಾವು 6-7 ದಿವಸ ಹೋದರೆ, ಉಪಾಧ್ಯಕ್ಷರೇ ಎಂದು ಕರೆಯುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾನು ತಮಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ಹೀಗಾಗಬಾರದು.

ಶ್ರೀ ಕುಂಬ್ಳೆ ಸುಂದರರಾವ್: ನಾನು ತಿದ್ದುಪಡಿ ಮಾಡಿಕೊಳ್ಳಬೇಕಾಗಿತ್ತು. ಮತ್ತು ಅದೇ ಪ್ರಭಾವ ಉಳಿದಿದೆ.

ಶ್ರೀ ವಾಟಾಳ್ ನಾಗರಾಜ್: ಅಲ್ಲಿ ಯಾರೇ ಕುಳಿತುಕೊಳ್ಳಲಿ ಅಧ್ಯಕ್ಷರೆ ಎಂದರೇ ಕರೆಯಬೇಕು.

ಶ್ರೀ ಕುಂಬ್ಳೆ ಸುಂದರರಾವ್: ನಾನು ಕೇಳಿರುವ ಪ್ರಶ್ನೆಗೆ ಅವರು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ರೋಡ್ ಕಟ್ಟಿಂಗ್ ಪರವಾನಿಗೆಯನ್ನು ಸಾರ್ವಜನಿಕರಿಗೆ ಮತ್ತು ಇತರೇ ಇಲಾಖೆಗಳಿಗೆ ಮಹಾನಗರಪಾಲಿಕೆಯವರು ನೀಡಬೇಕು. ಅವರು ಸ್ಥಳ ಪರಿಶೀಲನೆ ಮಾಡಿ ಮತ್ತೆ ಪೂರ್ವ ಸ್ಥಿತಿಗೆ ತರುವಂತೆ ಅರ್ಜಿದಾರರಿಂದ ವೆಚ್ಚ ವಸೂಲಿ ಮಾಡಿ ಪರವಾನಿಗೆ ಕೊಡಬೇಕು. ಹಾಗೆ ಮಾಡದಿದ್ದರೆ, ಅವರು ರೋಡ್ ಕಟಿಂಗ್ ಮಾಡಿ, ಸರಿಯಾಗಿ ಮುಚ್ಚದೆ ಸುಮ್ಮನೆ ಮಣ್ಣು ತುಂಬಿಸಿ ಹೋಗುತ್ತಾರೆ. ಆದುದರಿಂದ, ಸಕಾಲದಲ್ಲಿ ದುರಸ್ತಿ ಮಾಡುವುದನ್ನು ಕಡ್ಡಾಯವಾಗಿ ಮಾಡಿ ನಿಯಮಗಳನ್ನು ರೂಪಿಸಲು ಸರ್ಕಾರದವರು ಪರಿಶೀಲಿಸುವರೆ ಎಂದು ಕೇಳಿದರೆ, ಉದ್ಭವಿಸುವುದಿಲ್ಲವೆಂದಿದ್ದಾರೆ. ದುರಸ್ತಿ ಮಾಡದಿರುವುದರಿಂದ, ಟೂ-ವೀಲರ್, ಕಾರುಗಳು ಹೋಗುವುದಕ್ಕಾಗುವುದಿಲ್ಲ. ಆ ರೀತಿಯಾದಾಗ, ಟೂ-ವೀಲರ್ ಕಾರಿನವರು ಕೇಳುವ ಪ್ರಶ್ನೆಗಳಿಗೆ ಶಾಸಕರು ಉತ್ತರಿಸಬೇಕಾಗುತ್ತದೆ. ಆದುದರಿಂದ, ನಗರಪಾಲಿಕೆ ಅದನ್ನು ರಿಪೇರಿ ಮಾಡುವ ಹಾಗಿದ್ದರೆ, ಸಂಬಂಧಪಟ್ಟವರಿಂದ ಹಣ ವಸೂಲಿ ಮಾಡುವ ಹಾಗಿದ್ದರೆ, ಹಣವನ್ನು ಖರ್ಚು ಮಾಡುವುದಿಲ್ಲವೇಕೆ? ಯಾರಿಗೆ ನೀವು ಪರವಾನಿಗೆ ಕೊಟ್ಟಿರುತ್ತೀರಿ, ಅವರಿಂದ ಕಡ್ಡಾಯವಾಗಿ ಪುನಃ ಡಾಂಬರೀಕರಣ ಮಾಡಿಸಿ ಪೂರ್ವ ಸ್ಥಿತಿಗೆ ಏಕೆ ತರುವುದಿಲ್ಲ? ಆದುದರಿಂದ, ತಾವು ದಯವಿಟ್ಟು ಸಮರ್ಪಕವಾದ ಸಮಾಲೋಚನೆ ಮಾಡಿ ಒಂದು ಕಾನೂನನ್ನು ಮಾಡಬೇಕು.

ಶ್ರೀ ಬಿ.ಎನ್.ಬಚ್ಚೇಗೌಡ: ಮಾನ್ಯ ಸದಸ್ಯರು ತಿಳಿಸಿರುವ ಹಾಗೆ, ಇದನ್ನು ಸಾರ್ವಜನಿಕರು ಮತ್ತು ಇಲಾಖೆಯವರು ಮಾಡುವ ಕೆಲಸ. ಮಾನ್ಯ ಸದಸ್ಯರು

ಹೇಳಿರುವಂತೆ ಇದು ಮಂಗಳೂರಿನಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ಆಗುತ್ತಿದೆ, ಅದನ್ನು ನಾವೆಲ್ಲರೂ ಅನುಭವಿಸುತ್ತಿದ್ದೇವೆ. ಹಾಗೇ ಬಿಡುವ ಹಾಗೆ ಇಲ್ಲ. ಇಲಾಖೆಗಳೂ ಅದೇ ಕೆಲಸ ಮಾಡುತ್ತಿವೆ, ಸಾರ್ವಜನಿಕರೂ ಹಾಗೆ ಮಾಡುತ್ತಾರೆ.

ಶ್ರೀ ಕುಂಬ್ಳೆ ಸುಂದರರಾವ್: ನೀವು ಯಾರಿಗೆ ಪರವಾನಿಗೆ ಕೊಡುತ್ತೀರಿ, ಅವರಿಂದ ನಿರ್ದಿಷ್ಟ ಮೊತ್ತವನ್ನು ಸರಿಯಾಗಿ ಮಾಡದಿದ್ದರೆ ವಾಪಸ್ ಕೊಡುವುದಿಲ್ಲವೆಂದು ಹೇಳಿ ಡಿಪಾಸಿಟ್ ಮಾಡಿಸಿಕೊಳ್ಳಿ. ಆಗಲಾದರೂ ಅವರು ಸರಿಯಾಗಿ ಕೆಲಸ ಮಾಡುತ್ತಾರೆ.

ಶ್ರೀ ಬಿ.ಎನ್.ಬಚ್ಚೇಗೌಡ: ಅವರ ಸಲಹೆ ಸರಿಯಾಗಿದೆ. ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ.

ವಿಷಯ: ಹಿಂದುಳಿದ ಪಂಗಡದವರಿಗೆ ಆಸ್ಟಿನ್‌ಟೌನ್‌ನಲ್ಲಿ ಕಟ್ಟಿರುವ ಮನೆಗಳಿಗೆ ಮುದ್ರಾಂಕ ಶುಲ್ಕ ವಿನಾಯಿತಿ.

208 (1585)

ಶ್ರೀಮತಿ ಡಿ.ಜಿ.ಹೇಮಾವತಿ (ಶಾಂತಿನಗರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆರ್ಥಿಕವಾಗಿ ಹಿಂದುಳಿದ ಪಂಗಡದವರಿಗೆ ಆಸ್ಟಿನ್ ಟೌನ್‌ನಲ್ಲಿ 1942ನೇ ಇಸವಿಯಲ್ಲಿ ಕಟ್ಟಿದ ಮನೆಗಳನ್ನು ಬೆಂಗಳೂರು ನಗರ ಕಾರ್ಪೊರೇಷನ್‌ನವರು 1972ರಲ್ಲಿ 506 ಬಾಡಿಗೆದಾರರಿಗೆ ಕ್ರಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆರ್ಥಿಕವಾಗಿ ಹಿಂದುಳಿದ ಪಂಗಡದವರಿಗೆ ಈ ಮನೆಗಳನ್ನು ನೋಂದಣಿ ಮಾಡುವಾಗ್ಗೆ ಹೆಚ್ಚುವರಿ ಮುದ್ರಾಂಕ ಶುಲ್ಕ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ವಿಧಿಸುವ ಪಕ್ಷದಲ್ಲಿ ಸರ್ಕಾರವು ಇದಕ್ಕೆ ವಿನಾಯಿತಿ ನೀಡುವುದೇ?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) ಹೌದು.

ಆ) ಇಲ್ಲ. ಪ್ರಸ್ತುತ ಪ್ರಕರಣದಲ್ಲಿ ಅಪಮೌಲ್ಯವಾಗಿರಬಹುದಾದ ಪ್ರಕರಣಗಳಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆಯ ಕಲಂ - 45 ಎ (1)ರಡಿ ವಿಚಾರಣೆ ಮಾಡಲಾಗುತ್ತಿದೆ.